**ರೈತರ ಜಮೀನು ಬೆಲೆ ನಿಗಧಿಪಡಿಸಲು ಸರ್ಕಾರ ರಚಿಸಿರುವ ತಾಲ್ಲೂಕು ಮಟ್ಟದ ಸಮಿತಿ ರಚನೆ.**

643 - ಶ್ರೀ ಎ.ವಿ. ಉಮಾಪತಿ (ಹೊಳಲ್ಕೆರೆ) : ಮಾನ್ಯ ಕಂದಾಯ ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*(ಅ) ರೈತರ ಜಮೀನಿಗೆ ಬೆಲೆ ನಿಗಧಿಪಡಿಸಲು ಸರ್ಕಾರ ತಾಲ್ಲೂಕಿನ ಮಟ್ಟದಲ್ಲಿ ಸಮಿತಿ ರಚಿಸಿರುವ ಸಮಿತಿಯಲ್ಲಿ ಕೇವಲ ಸರ್ಕಾರಿ ಅಧಿಕಾರಿಗಳೇ ಸದಸ್ಯರಾಗಿರುವುದರಿಂದ ಜಮೀನು ಬೆಲೆ ನಿಗಧಿಪಡಿಸುವಾಗ ತಾರತಮ್ಯ ಉಂಟಾಗುವ ಸಂಭವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.*

*(ಆ) ಹಾಗಿದ್ದಲ್ಲಿ, ಸದರಿ ಸಮಿತಿಗೆ ಖಾಸಗಿಯ ಎರಡು ಸದಸ್ಯರನ್ನು ನೇಮಿಸುವುದು ಸಾಧ್ಯವೆ?*

ಶ್ರೀ ಧರ್ಮಸಿಂಗ್ (ಕಂದಾಯ ಮತ್ತು ಸಮಾಜ ಕಲ್ಯಾಣ ಸಚಿವರು.) :

(ಅ) ರೈತರ ಜಮೀನಿಗೆ ಮಾತ್ರವೇ ಬೆಲೆ ನಿಗಧಿಪಡಿಸಲು ತಾಲ್ಲೂಕು ಮಟ್ಟದ ಸಮಿತಿಗಳನ್ನು ರಚಿಸಿರುವುದಿಲ್ಲ. ರಾಜ್ಯದಲ್ಲಿರುವ ಎಲ್ಲಾ ಸ್ಥಿರಾಸ್ತಿಗಳ ಸರಿಯಾದ ಬೆಲೆಯನ್ನು ನಿಗಧಿಪಡಿಸಲು ಆಸ್ತಿಯ ನಿಜವಾದ ಮಾರುಕಟ್ಟೆ ಅಂದಾಜು ಬೆಲೆಯನ್ನು ಉಪ-ನೋಂದಣಿ ಕಛೇರಿಗಳಿಗೆ ಸಂಬಂಧಪಟ್ಟಂತೆ, ಆ ಪ್ರದೇಶಗಳಿಗೆ ಸಂಬಂಧಿಸಿದಂತೆ ನೋಂದಾಯಿಸಿರುವ ದಸ್ತಾವೇಜುಗಳ ಆಧಾರದ ಮೇಲೆ ಸ್ಥಿರಾಸ್ತಿಗಳ ಬೆಲೆ ನಿಗಧಿಪಡಿಸಲು ಸಮಿತಿಗಳನ್ನು ರಚಿಸಲಾಗಿದೆ.

ಲಭ್ಯವಿರುವ ಅಂಕಿ-ಅಂಶಗಳ ಆಧಾರದ ಮೇಲೆ ಆಸ್ತಿಗಳ ಮೌಲ್ಯ ನಿರ್ಧರಿಸುವುದರಿಂದ ಯಾವುದೇ ರೀತಿಯ ತಾರತಮ್ಯ ಉಂಟಾಗುವ ಸಂಭವವಿರುವುದಿಲ್ಲ.

(ಆ) ಉದ್ಭವಿಸುವುದಿಲ್ಲ.

**ತಾಲ್ಲೂಕು ಮಟ್ಟದ ಅಕ್ರಮ-ಸಕ್ರಮ ಸಮಿತಿಗಳು.**

13 - ಶ್ರೀ ಎಸ್. ಚಿಕ್ಕಮಾಧು (ಹುಣಸೂರು) : ಮಾನ್ಯ ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಸರ್ಕಾರದವರು ಈಗಾಗಲೇ ರಚಿಸಿರುವ ತಾಲ್ಲೂಕು ಮಟ್ಟದ "ಅಕ್ರಮ ಸಕ್ರಮ" ಸಮಿತಿಗಳ ಮೂಲಕ ರಾಜ್ಯದಲ್ಲಿ ಇದುವರೆಗೆ ಗುರುತಿಸಿರುವ ಒಟ್ಟು ಜಮೀನಿನ ಪ್ರಮಾಣವೆಷ್ಟು?*

*ಆ) ಆದರಲ್ಲಿ ಈಗಾಗಲೇ ಸಕ್ರಮಗೊಂಡಿರುವ ಭೂಮಿಯ ಪ್ರಮಾಣವೆಷ್ಟು ಮತ್ತು ಆ ರೀತಿ ಸಕ್ರಮಗೊಂಡ ಜಮೀನುಗಳಿಂದ "ಕಿಮ್ಮತ್ತು" ರೂಪದಲ್ಲಿ ಸರ್ಕಾರಕ್ಕೆ ಈಗಾಗಲೇ ಸಂದಾಯವಾಗಿರುವ ಮೊಬಲಗೆಷ್ಟು?*

*ಇ) ಈ ಬಗ್ಗೆ ಸರ್ಕಾರದ ಹಾಲಿ ನಿಯಮದಂತೆ ಈಗಾಗಲೇ ಸಕ್ರಮಗೊಂಡಿರುವ ಪ್ರತಿ ಒಂದು ಎಕರೆ ಜಮೀನಿಗೆ ಐದು ರೂ. ಕಂದಾಯದಂತೆ ಆದರ ಎರಡು ನೂರು ಪಟ್ಟು ಕಿಮ್ಮತ್ತು ಅಂದರೆ ಎಕರೆ ಒಂದಕ್ಕೆ ಅಂದಾಜು ಒಂದು ಸಾವಿರ ರೂ.ಗಳಿಗೂ ಮಿಗಿಲಾಗಿ ಈ ಕಿಮ್ಮತ್ತು ರೂಪದಲ್ಲಿ ವಸೂಲಿ ಮಾಡುತ್ತಿರುವುದು ದುರ್ಬಲ ವರ್ಗದ ವ್ಯವಸಾಯಗಾರರಿಗೆ ಸದರಿ ಹಣವನ್ನು ತುಂಬಲು ಆರ್ಥಿಕ ಶಕ್ತಿ ಇಲ್ಲದೆ ತೊಂದರೆಗೊಳಗಾಗಿರುವ ಸರ್ಕಾರದ ಗಮನಕ್ಕೆ ಬಂದಿದೆಯೇ?*

*ಈ) ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಈಗಾಗಲೇ ಕೈಗೊಂಡಿರುವ ಕ್ರಮಗಳೇನು?*

*ಉ) ಇಲ್ಲದಿದ್ದಲ್ಲಿ ಇನ್ನು ಮುಂದೆಯಾದರೂ ಈ ದುರ್ಬಲವರ್ಗದ ರೈತರ ಹಿತದೃಷ್ಟಿಯಿಂದ ಈ ಬಗ್ಗೆ ಕೈಕೊಳ್ಳಬಹುದಾದ ತುರ್ತು ರೀತಿಯ ನೀತಿ ನಿಯಮಗಳೇನು?*